ದಿನಾಂಕಃ 21-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ.ಎಸ್ ಐ ಡಿ ವಕೀಲರಿಂದ

ನಿಡಿ.1 ದಾಖಲೆಯ ಕೊನೆ ಪುಟದಲ್ಲಿ ಪಾರ್ಥಸಾರಥಿ ಮತ್ತು ಬಿ ಎಂ ಮುನಿವೆಂಕಟಪ್ಪ ಎಂದು ಇರುತ್ತದೆ ಎಂದರೆ ಸರಿ. ಮುನಿವೆಂಕಟಪ್ಪನವರು ಹೇಗೆ ಸಹಿ ಮಾಡುತ್ತಾರೆ ಅಂತ ನಿಮಗೆ ಗೊತ್ತಿರುವುದಿಲ್ಲ ಎಂದರೆ ಪತ್ರದಲ್ಲಿ ನೋಡಿರುತ್ತೇನೆ ಮುನಿವೆಂಕಟಪ್ಪ ನವರು ನಿಡಿ.6 ದಾಖಲೆಗೆ ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಹೌದು. ನಿಡಿ.1 ಮತ್ತು ನಿಡಿ.2 ದಾಖಲೆಗೆ ಮುನಿವೆಂಕಟಪ್ಪವರದ್ದು ಇಂಗ್ಲೀಷ್ ನಲ್ಲಿ ಸಹಿ ಇದೆ ಎಂದರೆ ಹೌದು. ಯಾವುದೇ ಒಬ್ಬ ವ್ಯಕ್ತಿ ಸಹಿ ಮಾಡಿದರೆ ಒಂದೇ ರೀತಿ ಮಾಡುತ್ತಾರೆ ಎಂದರೆ ಹೌದು. ಸಬ್ ರಿಜಿಸ್ಟ್ರಾರ್ ನಲ್ಲಿ ಪ್ರಿಂಟ್ ಆದ ನಂತರ ಸಾಕ್ಷಿ ಕಾಲಂ ನಲ್ಲಿ ಮುನಿವೆಂಕಟಪ್ಪನವರು ಸಹಿ ಮಾಡಿರುವುದಿಲ್ಲ ಎಂದರೆ ಹೌದು. ಮುನಿವೆಂಕಟಪ್ಪ ಬದಲಿಗೆ ನಾರಾಯಣಸ್ವಾಮಿ ಎನ್ನುವವರು ಸಹಿ ಮಾಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ತಾವುಯಾವುದೇ ದಾಖಲೆಯನ್ನು ಮಾಡಿದಾಗ ಸಹಿ ತಪ್ಪಾದರೆ ಮಾಡುವುದಿಲ್ಲ ಎಂದರೆ ಹೌದು. ಈ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನಿಮ್ಮನ್ನು ವಿಚಾರಣೆ ಮಾಡಿದಾಗ ನೀವು ನೋಡಿರುತ್ತೀರಿ ಎಂದರೆ ಹೌದು. ದಾಖಲಾತಿಗಳನ್ನು ನೋಡಿದಾಗ ಅದರಲ್ಲಿ ಇರುವ ಸಹಿಯನ್ನು ತಾವೇ ಮಾಡಿಸಿರುವುದು ಅಂತ ನಿಮಗೆ ಅನ್ನಿಸಿರುತ್ತದೆ ಎಂದರೆ ಹೌದು. 2012 ರಿಂದ 24 ರವರೆಗೆ ಎಷ್ಟು ದಾಖಲೆಗಳನ್ನು ಮಾಡಿಸಿರುತ್ತಾರೆ ಎಂಬುದರ ಬಗ್ಗೆ ನಿಮಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ ಎಂದರೆ ಹೌದು. ಅಷ್ಟು ವರ್ಷಗಳಲ್ಲಿ ಪಾರ್ಟಿಗಳು ಯಾರು ಯಾರು ಬಂದಿರುತ್ತಾರೆ ಅಂತ ನಿಮಗೆ ಗೊತ್ತಾಗುವುದಿಲ್ಲ ಎಂದರೆ ಹೌದು. ನಿಡಿ.1 ರ ಪುಟ ಸಂಖ್ಯೆ 3 ರಲ್ಲಿ ಬರೆದಿರುವ ಬರವಣಿಗೆ ಪಾರ್ಥಸಾರಥಿ ರವರದ್ದು ಎಂದರೆ ಹೌದು. ಅದರಲ್ಲಿ ಬರೆದಿರುವ ಪಾರ್ವತಮ್ಮನವರ ಸಹಿ ಮತ್ತು ಪಾರ್ಥಸಾರಥಿ ರವರ ಸಹಿ ಮಾಡಿರುವ ಪೆನ್ನಿನ ಇಂಕ್ ಎಂದೇ ಎಂದರೆ ಗೊತ್ತಾಗುತ್ತಿಲ್ಲ. ದಿಃ19-05-12 ರ ಹಿಂದಿನ ದಿನ ಪಾರ್ವತಮ್ಮ ನವರು ಬೆಂಗಳೂರಿನಲ್ಲಿ ಇರುವ ಅವರ

ತಂಗಿ ಮತ್ತು ಮಗಳ ಮನೆಯಲ್ಲಿ ಇರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಿಃ17-05-12 ಮತ್ತು ದಿಃ18-05-12 ರಂದು ಪಾರ್ವತಮ್ಮನವರು ತಮ್ಮ ಬಳಿ ಬಂದಿರುವುದಿಲ್ಲ ಎಂದರೆ ಇಲ್ಲ. ಆಗ ಅವರು ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಇಲ್ಲ. ದಿಃ19-05-12 ಕ್ಕೆ ಮೊದಲು ಪಾರ್ಥಸಾರಥಿ ರವರು ದಾಖಲೆಗಳನ್ನು ತಂದು ಕೊಟ್ಟಿರುತ್ತಾರಾ ಎಂದರೆ ಇಲ್ಲ. ದಿಃ19-05-12 ಕ್ಕೆ ಪಾರ್ವತಮ್ಮನವರು ಬೆಂಗಳೂರಿನಿಂದ ಸುಮಾರು 3 ಗಂಟೆಗೆ ಬರುತ್ತಾರೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ. ದಿಃ19-05-12 ಕ್ಕಿಂತ ಮೊದಲುಪಾರ್ಥಸಾರಥಿ ರವರು ವಿಲ್ ಆಗಲೀ ರದ್ದು ಪಡಿಸಿದ್ದಾಗಲೀ ಕರಾರು ಪತ್ರವಾಗಲೀ ತೆಗೆದುಕೊಂಡು ಹೋಗಿರುತ್ತಾರಾ ಎಂದರೆ ಇಲ್ಲ ಸಾಮಾನ್ಯವಾಗಿ ಯಾವುದೇ ವ್ಯಕ್ತಿ ದಾಖಲೆಗಳನ್ನು ನೊಂದಣಿ ಮಾಡಿಸುವ ಪೂರ್ವದಲ್ಲಿ ದಾಖಲೆಗಳನ್ನು ಕೊಟ್ಟು ಅದರ ಪೂರ್ವಾಪರಗಳನ್ನು ವಿಚಾರ ಮಾಡುತ್ತಾರೆ ಎಂದರೆ ಹೌದು. ಆ ದಾಖಲೆಗಳ ಆದಾರದ ಮೇಲೆ ಯಾವ ರೀತಿ ಪತ್ರ ಮಾಡಬೇಕು ಅಂತ ವಿಚಾರ ಮಾಡುತ್ತೀರಿ ಎಂದರೆ ಹೌದು. ದಿಃ19-05-12 ರ ಮೊದಲು ಪಾರ್ವತಮ್ಮನವರು ತಮ್ಮನ್ನು ಯಾವತ್ತೂ ಬೇಟಿಯಾಗಿರುವುದಿಲ್ಲ ಎಂದರೆ ಹೌದು. ಬಹಳಷ್ಟು ನೊಂದಣಿ ಇದ್ದಾಗ ತಮ್ಮ ಸಹಾಯಕರನ್ನು ಇಟ್ಟುಕೊಂಡಿರುತ್ತೀರಿ ಎಂದರೆ ಹೌದು. ಬೆರಳಚ್ಚು ಪಡಿಸಲು ಸಹಾಯಕರನ್ನು ಇಟ್ಟುಕೊಂಡಿರುತ್ತೀರಿ ಎಂದರೆ ಹೌದು. ತಮ್ಮ ಸಹಾಯಕರ ಕಡೆಯಿಂದ ಬೆರಳಚ್ಚು ಪಡಿಸಿರುತ್ತೀರಿ ಎಂದರೆ ಹೌದು. 2012 ರಲ್ಲಿ ನನ್ನ ಸಹಾಯಕರಾಗಿ ನನ್ನ ಬಳಿ ಮೂರು ಜನರು ಇರುತ್ತಾರೆ. ಆ ಮೂರು ಜನರಲ್ಲಿ ನಿಡಿ-1, 2, 6 ದಾಖಲೆಯನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದರೆ ನೆನಪಿರುವುದಿಲ್ಲ.

ವಿಲ್ ಅನ್ನು ಬದಲಾವಣೆ ಮಾಡಬೇಕಾದರೆ ಅಥವಾ ಅದರಲ್ಲಿ ಆಸ್ತಿಗಳನ್ನು ಬಂಗಾರವನ್ನು ಅಥವಾ ವ್ಯಕ್ತಿಗಳನ್ನು ಸೇರಿಸಬೇಕಾದರೆ ವಿಲ್ ಬದಲಾವಣೆ ಮಾಡುತ್ತಾರೆ ಎಂದರೆ ಹೌದು. ನಿಡಿ-1 ರಲ್ಲಿ ಕೆಲವೊಂದು ಬದಲಾವಣೆ ಮಾಡಲು ಅಂತ ಇದೆ ಎಂದರೆ ಸರಿ. ನಿಡಿ-2 ರ ಪ್ರಕಾರ ಕೆಲವೊಂದು ಬದಲಾವಣೆ ಅಲ್ಲ ಎಂದರೆ ಹೌದು. ನಿಡಿ-2 ರ ಪುಟ ಸಂಖ್ಯೆ 5 ರಲ್ಲಿ ಬಿ ಎಂ ಮುನಿವೆಂಕಟಪ್ಪ ನಾರಾಯಣಸ್ವಾಮಿ ಸಾಕ್ಷಿಗಾರರಾಗಿರುತ್ತಾರೆ ಎಂದರೆ ಹೌದು. ಪುಟ ಸಂಖ್ಯೆ 4 ರಲ್ಲಿ ಮುನಿವೆಂಕಟಪ್ಪ ರವರ ಸಹಿ ಇರುವುದಿಲ್ಲ ಎಂದರೆ ಹೌದು. ಸಾಕ್ಷಿಗಳು ಪಾರ್ಟಿಗಳನ್ನು ಗುರುತಿಸಿ ಸಹಿ ಮಾಡುವುದು ಎಂದರೆ ಹೌದು. ನಿಮ್ಮ ಸಹಾಯಕರವರಿಗೆ ಪಾರ್ವತಮ್ಮನವರು

ಯಾರು ಅಂತ ಗೊತ್ತಿರುವುದಿಲ್ಲ ಎಂದರೆ ಹೌದು. ನನಗೆ ಯಾವುದೇ ಸಂತತಿ ಇರುವುದಿಲ್ಲ ಅಂತ ಬರೆದಿರುವುದು ನೀವು ಬೆರಳಚ್ಚು ಮಾಡಿದರೆ ಗೊತ್ತಾಗುತ್ತಿತ್ತು ನಿಮ್ಮ ಸಹಾಯಕರು ಮಾಡಿದ್ದರಿಂದ ಗೊತ್ತಾಗಿರುವುದಿಲ್ಲ ಎಂದರೆ ಹೌದು. ನೀವು ಬೆರಳಚ್ಚು ಮಾಡಿದ್ದರೆ ಪಾರ್ವತಮ್ಮ ನವರು ನಿಮಗೆ ಗೊತ್ತಿದ್ದು ಅವರಿಗೆ ಮಂಜುಳ ರವರು ಸಂತತಿ ಇದೆ ಅಂತ ನಿಮಗೆ ಗೊತ್ತಿದ್ದು ಬೆರಳಚ್ಚು ಪಡಿಸುತ್ತಿದ್ದೀರಿ ಎಂದರೆ ಹೌದು. ನಾನು ಪಾರ್ವತಮ್ಮನವರ ಪಕ್ಕದ ಮನೆಯವರು ಅಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದಾಗ ಮಂಜುಳ ಮತ್ತು ಪಾರ್ಥಸಾರಥಿ ಅಂತ ಇದ್ದು ದಾವೆ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ದಿನಾಂಕಕ್ಕಿಂತ ಪೂರ್ವದಲ್ಲಿ ನ್ಯಾಯಾಲಯದಲ್ಲಿ ಕಡತ ತೆಗೆಸಿ ನೋಡಿರುವುದಿಲ್ಲ ಎಂದರೆ ಇಲ್ಲ. ಪಾರ್ಥಸಾರಥಿಯವರು ನನಗಾಗಲೀ ಅಥವಾ ನಾನು ಅವರಿಗಾಗಲೀ ಫೋನ್ ಕರೆ ಮಾಡಿರುವುದಿಲ್ಲ. ಪ್ರಮಾಣ ಪತ್ರವನ್ನು ಯಾರು ತಂದಿರುತ್ತಾರೆ ಅಂತ ನನಗೆ ನೆನಪಿರುವುದಿಲ್ಲ. ನ್ಯಾಯಾಲಯದಲ್ಲಿ ಬರುವವರೆಗೂ ಆ ಪ್ರಮಾಣ ಪತ್ರವನ್ನು ಯಾರು ಕೊಟ್ಟಿರುತ್ತಾರೆ ಅಂತ ಮರೆತಿರುತ್ತೇನೆ ತಾವು ಟೈಪಿಸ್ಟ್ ಆಗಿರುವುದರಿಂದ ಹಾಗೂ ಪ್ರಕರಣದ ಬಗ್ಗೆ ಗೊತ್ತಿದ್ದರಿಂದ ತಾವೇ ಬೆರಳಚ್ಚುಪಡಿಸಿಕೊಂಡು ಬರುತ್ತೀದ್ದೀರಿ ಎಂದರೆ ಹೌದು. ಆ ದಾಖಲೆಯು 11 ವರ್ಷದ ಹಳೆಯದಾದ ಕಾರಣ ತಾವು ಬರೆದಿರುವುದಿಲ್ಲ ಎಂದರೆ ಹೌದು. ತಮಗೆ ಗೊತ್ತಿರುವ ಹಾಗೆ ಪಾರ್ವತಮ್ಮನವರಿಗೆ ತಿಂಡಿ ಮಾಡಿಕೊಂಡು ತಿನ್ನುವ ಹಾಗೆ ಇದ್ದರು ಎಂದರೆ ಹೌದು ನಂತರ ಆರೋಗ್ಯ ಸಮಸ್ಯೆ ಇರುತ್ತದೆ. ಆರೋಗ್ಯ ಸರಿ ಇಲ್ಲದ ಕಾರಣ ಬೆಂಗಳೂರಿಗೆ ಹೋಗಿರುತ್ತಾರೆ ಎಂದರೆ ಗೊತ್ತಿಲ್ಲ, ಬಟ್ಟೆ ತೆಗೆದುಕೊಳ್ಳುವ ಬಗ್ಗೆ ಪಾರ್ವತಮ್ಮನಿಗೆ ಕೊರತೆ ಇರಲಿಲ್ಲ ಎಂದರೆ ಹೌದು. ತಮ್ಮನೇ ಬಟ್ಟೆ ಕೊಡಬೇಕು ಎನ್ನುವ ಬಗ್ಗೆ ಪಾರ್ವತಮ್ಮ ನವರು ಅವಲಂಬಿತರಾಗಿರುವುದಿಲ್ಲ ಎಂದರೆ ಅದರ ಬಗ್ಗೆ ಗೊತ್ತಿಲ್ಲ. ಪಾರ್ವತಮ್ಮನಿಗೆ ವಸತಿ ಸೌಕರ್ಯ ಮಾಡುವ ಅವಶ್ಯಕತೆ ಇರಲಿಲ್ಲ ಅವರು ಸ್ವಂತ ಮನೆಯಲ್ಲಿ ವಾಸ ಇದ್ದರು ಎಂದರೆ ಹೌದು. ಪಾರ್ವತಮ್ಮನವರ ಆಸ್ಪತ್ರೆಯ ಖರ್ಚು ನೋಡಿಕೊಳ್ಳಲು ತಂಗಿ, ಮಗಳು ಇದ್ದು ಪಾರ್ಥಸಾರಥಿಯವರು ನೋಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ತಾವು ಇಲ್ಲಿ ಇರುವುದರಿಂದ ಪಾರ್ಥಸಾರಥಿ ರವರು ಬಿಜಿನೇಸ್ ಬಗ್ಗೆ ಗೊತ್ತಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ಪಾರ್ಥಸಾರಥಿರವರು ಸಾಲ ಮಾಡಿಕೊಂಡು ಊರು ಬಿಟ್ಟ ಬಗ್ಗೆ

ಗೊತ್ತಿರುತ್ತದಾ ಎಂದರೆ ಗೊತ್ತಿರುವುದಿಲ್ಲ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪಾರ್ವತಮ್ಮ ನವರು ಮತ್ತು ಪಾರ್ಥಸಾರಥಿ ರವರು ಯಾವ ಸಮಯದಲ್ಲಿ ಬಂದಿರುತ್ತಾರೆ ಅಂತ ಬರೆಸಿರುವುದಿಲ್ಲ ಎಂದರೆ ಬರೆಸಿರುವುದಿಲ್ಲ. ನಿಡಿ.6 ರಲ್ಲಿಯೂ ಸಹ ಸಾಕ್ಷಿದಾರರು ಬೇರೆ ಇದ್ದು ಸಹಿ ಮಾಡಿದವರು ಬೇರೆ ಇರುತ್ತಾರೆ ಎಂದರೆ ಹೌದು. ಪಾರ್ವತಮ್ಮ ನವರನ್ನು ಪಾರ್ಥಸಾರಥಿ ರವರು ದಿ:19-05-12 ರಂದು ಮದ್ಯಾಹ್ಞ 3 ಗಂಟೆಗೆ ಬೆಂಗಳೂರಿನಿಂದ ಕ್ರಯದ ರದ್ದತಿಗಾಗಿ ಕರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಮೂರು ದಾಖಲೆಗಳನ್ನು ಮಾಡಲು ಕರೆಸಿಕೊಂಡಿರುತ್ತಾರೆ. ಪಾರ್ವತಮ್ಮ ಮತ್ತು ಪಾರ್ಥಸಾರಥಿ ಇಬ್ಬರೂ ಬಂದಿರುತ್ತಾರೆ. ಯಾರು ದಾಖಲೆಗಳನ್ನು ನೊಂದಣಿ ಮಾಡಿಸುತ್ತಾರೋ ಅವರೇ ಸಾಕ್ಷಿಗಳನ್ನು ಕರೆಸಬೇಕು ಎಂದರೆ ಹೌದು. ಆ ಸಾಕ್ಷಿದಾರರು ಬರಹಗಾರಗೆ ಪರಿಚಯ ಇರಬೇಕು ಅಂತ ಇಲ್ಲ ಎಂದರೆ ಹೌದು. ನಿಮಗೂ ಮುನಿವೆಂಕಟಪ್ಪನಿಗೂ ಯಾವುದೇ ವ್ಯವಹಾರ ಇರುವುದಿಲ್ಲ, ಪರಿಚಯ, ಸ್ನೇಹ ಇರುವುದಿಲ್ಲ ಎಂದರೆ ಹೌದು. ಮುನಿವೆಂಕಟಪ್ಪ ಮತ್ತು ನಾರಾಯಣಸ್ವಾಮಿ ರವರು ಪಾರ್ಥಸಾರಥಿ ರವರ ಸ್ನೇಹಿತರು ಎಂದರೆ ಗೊತ್ತಿಲ್ಲ. ಪಾರ್ವತಮ್ಮನವರಿಗೂ ಹಾಗೂ ಸಾಕ್ಷಿದಾರರಿಗೂ ವಯಸ್ಸಿನ ಅಂತರ ಇದೆ ಎಂದರೆ ಹೌದು. ಮುನಿವೆಂಕಟಪ್ಪ ಮತ್ತು ನಾರಾಯಣಸ್ವಾಮಿ ರವರನ್ನು ಪಾರ್ಥಸಾರಥಿ ರವರೇ ಕರೆದುಕೊಂಡು ಬಂದಿರುತ್ತಾರಾ ಎಂದರೆ ಗೊತ್ತಿರುವುದಿಲ್ಲ ಎಲ್ಲಾ ಒಟ್ಟಿಗೆ ಬಂದಿರುತ್ತಾರೆ. ಮುನಿವೆಂಕಟಪ್ಪ ದಾಖಲೆಗಳಿಗೆ ಯಾವಾಗ ಸಹಿ ಮಾಡಿರುತ್ತಾರೆ ಅಂತ ಗೊತ್ತಿರುವುದಿಲ್ಲ ಎಂದರೆ ಸ್ವಲ್ಪ ಸ್ವಲ್ಪ ಸಮಯದ ನಂತರ ಮಾಡಿರುತ್ತಾರೆ. ಬರಹಗಾರರ ಕೆಲಸ ಬರವಣಿ ಮಾಡುವುದು ಮಾತ್ರ ಎಂದರೆ ಹೌದು ಯಾರು ಆ ದಾಖಲೆಯನ್ನು ನೀಡುತ್ತಾರೋ ಅವರು ನೊಂದಣಿ ಮಾಡಿಸುವ ಕೆಲಸ ಎಂದರೆ ಹೌದು. ಬರಹಗಾರರ ಮುಂದೆ ಸಹಿ ಮಾಡಬೇಕು ಎಂಬ ಯಾವುದೇ ಕಾನೂನು ಇಲ್ಲ ಎಂದರೆ ಇಲ್ಲ ನನ್ನ ಮುಂದೆ ಸಹಿ ಮಾಡಿರುತ್ತಾರೆ. ದಿ:19-05-12 ಕ್ಕೆ ಈ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಯನ್ನು ಮಾಡಿರುತ್ತೀರಿ ಎಂದರೆ ನನಗೆ ನೆನಪಿರುವುದಿಲ್ಲ. ನಿಮ್ಮ ಮೂರು ಜನ ಸಹಾಯಕರು ಬೆರಳಚ್ಚು ಪಡಿಸಿದರೆ ತಾವೇ ಸಹಿ ಮಾಡಬೇಕು ಎಂದರೆ ಸಾಕ್ಷಿಯು ನನ್ನ ಮಾಹಿತಿ ಮೇರೆಗೆ ಬೆರಳಚ್ಚು ಮಾಡುತ್ತಾರೆ. ದಿ:19-05-12 ರಂದು ಪಾರ್ಥಸಾರಥಿ ರವರು ಮದ್ಯಾಹ್ಞ ಪಾರ್ವತಮ್ಮ ನವರನ್ನು ಕರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪಾರ್ವತಮ್ಮ ಮತ್ತು ಪಾರ್ಥಸಾರದಿ ಮತ್ತು

ಸಾಕ್ಷಿದಾರು ಬೆಳಿಗ್ಗೆ ಬಂದು ದಾಖಲೆ ತಯಾರು ಮಾಡಿದಾಗ 3 ಗಂಟೆಗೆ ಸಹಿ ಮಾಡಿರುತ್ತಾರೆ. ನಿಮ್ಮದು ಯಾವುದೇ ಕಛೇರಿ ಇಲ್ಲ ಎಂದರೆ ಹೌದು. ದಿ:19-05-12 ರಂದು ಎಷ್ಟು ದಾಖಲೆಗಳನ್ನು ಮಾಡಿರುತ್ತೀರಿ ಯಾರು ಯಾರು ಎಷ್ಟು ಸಮಯಕ್ಕೆ ಬಂದಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ಸಬ್ ರಿಜಿಸ್ಟ್ರಾರ್ ನಲ್ಲಿ ದಾಖಲೆಗಳನ್ನು ಹಿಂದನ ದಿನವೇ ತಯಾರು ಮಾಡಿಕೊಂಡು ಇಟ್ಟಿರುತ್ತೀರಿ ಎಂದರೆ ಹೌದು. ದಿ:19-05-12 ಕ್ಕೆ ಪಾರ್ಥಸಾರಥಿರವರು ವೈಯುಕ್ತಿಕವಾಗಿ ಹಾಜರಿರುವ ಅವಶ್ಯಕತೆ ಇರಲಿಲ್ಲ ಎಂದರೆ ಹೌದು. ಅವರ ಅಕ್ಕ ವೈಯುಕ್ತಿಕವಾರ ಶಿಕ್ಷಿತರಾಗದೇ ಇರುವ ಕಾರಣ ಪಾರ್ಥಸಾರಥಿ ಬಂದಿರುತ್ತಾರೆ ಎಂದರೆ ಹೌದು. ಮೂರು ದಾಖಲೆಗಳಿಗೆ ಪಾರ್ಥಸಾರಥಿರವರೇ ಮುಂದಾಳತ್ವ ವಹಿಸಿದ್ದರು ಎಂದರೆ ಪಾರ್ವತಮ್ಮನವರು ಮಾಹಿತಿ ಕೊಟ್ಟಿರುತ್ತಾರೆ, ಪಾರ್ಥಸಾರಥಿರವರೇ ಓಡಾಡಿ ಮಾಡಿಸಿರುತ್ತಾರೆ ಎಂದರೆ ನೆನಪಿರುವುದಿಲ್ಲ. ಬರಹಗಾರರ ಪೀ ಅನ್ನು ಯಾರು ಕೊಟ್ಟಿರುತ್ತಾರೆ ಅಂತ ನೆನಪಿರುವುದಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.